ನಗರ ಸ್ತ್ರೀಶಕ್ತಿ ಯೋಜನೆಯಡಿ ಗುಂಪುಗಳಿಗೆ ಕಿಟ್ ಮೆಟೀರಿಯಲ್ಸ್ ಒದಗಿಸಲು ತುರುವೇಕೆರೆ ತಾಲ್ಲೂಕಿಗೆ ರೂ. 6,000/– ಬಿಡುಗಡೆ ಮಾಡಲಾಗಿದೆ.

ಇ) ಗ್ರಾಮೀಣ ಸ್ತ್ರೀಶಕ್ತಿ ಯೋಜನೆಯಡಿ ಈಗಾಗಲೇ ಹಣ ಬಿಡುಗಡೆ ಮಾಡಲಾಗಿದೆ.

ನಗರ ಸ್ತ್ರೀಶಕ್ತಿ ಯೋಜನೆಯಡಿ ಸುತ್ತುನಿಧಿ ಬಿಡುಗಡೆಗಾಗಿ ಗ್ರೇಡಿಂಗ್ ಪ್ರಕ್ರಿಯೆ ನಡೆಯುತ್ತಿದ್ದು, ಇದು ಪೂರ್ಣಗೊಂಡ ನಂತರ ಪ್ರತಿ ಗುಂಪಿಗೆ ತಲಾ ರೂ. 5,000/– ದಂತೆ ಸುತ್ತುನಿಧಿಯನ್ನು ನೀಡಲಾಗುವುದು.

5594(6327) : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇರುವ ಒಟ್ಟು ನ್ಯಾಯಬೆಲೆ ಅಂಗಡಿಗಳೆಷ್ಟು; ಇದರಲ್ಲಿ ನ್ಯಾಯಬೆಲೆಯಲ್ಲಿ ವಿತರಿಸಲಾಗುವ ವಿವಿಧ ಬಗೆಯ ಪಡಿತರವೆಷ್ಟು; (ವಿವರ ನೀಡುವುದು)

ಆ) ತುರುವೇಕೆರೆ ಕ್ಷೇತ್ರಕ್ಕೆ ಹೊಸದಾಗಿ ಎಷ್ಟು ಅಂಗಡಿಗಳನ್ನು ನೀಡಲು ಉದ್ದೇಶಿಸಲಾಗಿದೆ?

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):

ಅ) ರಾಜ್ಯದಲ್ಲಿ 2005ನೇ ಜೂನ್ ಅಂತ್ಯಕ್ಕೆ ಒಟ್ಟು 20621 ನ್ಯಾಯಬೆಲೆ ಅಂಗಡಿಗಳಿರುತ್ತವೆ. ಇವುಗಳಲ್ಲಿ ಅಕ್ಕಿ, ಗೋಧಿ, ರಾಗಿ, ಸಕ್ಕರೆ ಹಾಗೂ ಸೀಮೆಎಣ್ಣೆಯನ್ನು ಕೆಳಕಂಡ ಪ್ರಮಾಣದಲ್ಲಿ ವಿತರಿಸಲಾಗುತ್ತದೆ.

ಪ್ರಮಾಣ ಕೆ.ಜಿ. ಗಳಲ್ಲಿ

ಕ್ರಮ ಸಂ.	ಪಡಿತರ	ಎಎವೈ	ಬಿಪಿಎಲ್	ಎಪಿಎಲ್
1	ಅಕ್ಕಿ	28	20	–
2	ಗೋಧಿ	7	5	–
3	ಸಕ್ಕರೆ	1.50	1.50	–
4	ರಾಗಿ	7	5	–

ಸೀಮೆಎಣ್ಣೆ : 8ಲೀ. ಅಪ ಪ್ರದೇಶ, 6 ಲೀ. ನಗರ ಪಟ್ಟಣ ಪ್ರದೇಶ, 4 ಲೀ. ಗ್ರಾಮಾಂತರ ಪ್ರದೇಶದ ಎಲ್ಲಾ ಎಎವೈ, ಬಿಪಿಎಲ್ ಹಾಗೂ ಎಪಿಎಲ್ ಅನಿಲ ರಹಿತ ಪಡಿತರ ಚೀಟಿದಾರರಿಗೆ ವಿತರಿಸಲಾಗುತ್ತಿದೆ.

ಎಪಿಎಲ್ ಪಡಿತರ ಚೀಟಿದಾರರಿಂದ ಆಹಾರ ಧಾನ್ಯಗಳ ಬೇಡಿಕೆ ಇಲ್ಲದೆ ಇರುವುದರಿಂದ ಎಪಿಎಲ್ ಪಡಿತರ ಚೀಟಿದಾರರಿಗೆ ಆಹಾರಧಾನ್ಯವನ್ನು ವಿತರಣೆ ಮಾಡುತ್ತಿರುವುದಿಲ್ಲ.

ಆ) ಸಮೀಕ್ಷಾ ಕಾರ್ಯ ಮುಕ್ತಾಯಗೊಂಡ ನಂತರ ಪಡಿತರ ಚೀಟಿಗಳ ಸಂಖ್ಯೆಯನ್ನಾಧರಿಸಿ ನಿರ್ಧರಿಸಲಾಗುವುದು.